ಹೆಬ್ರಿವಲಯದ ಅರಣ್ಯ ಉತ್ಪನ್ನಗಳಾದ ಹಾಲು ಮಡ್ಡಿಯ ಕುರಿತು

೩೩೪ (೬೯೮) ಶ್ರೀ ಬಿ. ರಾಜುಗೌಡ (ಹನೂರು).—ಮಾನ್ಯ ವ್ಯವಸಾಯ ಮತ್ತು ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಹೆಬ್ರಿವಲಯದ ಕಾಡುಗಳಿಂದ ಹಾಲುಮಡ್ಡಿಯನ್ನು ಯಾವುದಾದರೂ ಸಹಕಾರಿ ಸಂಘಕ್ಕೆ ಗುತ್ತಿಗೆಗೆ ಕೊಡಲಾಗಿದೆಯೇ ?

ಆ) ಕೊಟ್ಟಿದ್ದಲ್ಲಿ ಯಾವ ಸಹಕಾರಿ ಸಂಘಕ್ಕೆ ಯಾವಾಗ ನೀಡಲಾಯಿತು ? ಮತ್ತು ಕೊಟ್ಟಿರುವ ಮರಗಳ ಸಂಖ್ಯೆ ಎಷ್ಟು ?

ಇ) ಸಹಕಾರಿ ಸಂಘಕ್ಕೆ ಗುತ್ತಿಗೆಗೆ ಕೊಟ್ಟಿದ್ದಲ್ಲಿ ಕರಾರು ಪತ್ರ ಮಾಡಿಕೊಂಡ ದಿನಾಂಕ: ಮತ್ತು ಕರಾರು ಪತ್ರದ ನಿಬಂಧನೆಗಳ ವಿವರವಾದ ಮಾಹಿತಿ ನೀಡುವುದು ?

ಶ್ರೀ ಬಿ. ರಾಚಯ್ಯ (ವ್ಯವಸಾಯ ಮತ್ತು ಅರಣ್ಯ ಮಂತ್ರಿಗಳು).—

ಅ) ಹೌದು

ಆ) ಗಿರಿಜನರ ದೊಡ್ಡ ಪ್ರಮಾಣದ ವಿವಿಧೋದ್ದೇಶ ಸಹಕಾರಿ ಸಂಘ, ಉಡುಪಿ, ಇವರಿಗೆ ೧೯೮೮–೯೦ರ ಸಾಲಿಗೆ ಗುತ್ತಿಗೆಯನ್ನು ನೀಡಿದೆ.

ಹಾಲುಮಡ್ಡಿ ಮರಗಳು ಒಂದೆಡೆ ಗುಂಪಾಗಿ ಇರದೆ ಒಂದೊಂದೆ ಮರಗಳ ದೂರ ದೂರ ನೂರಾರು ಚದುರ ಕಿ.ಮಿ. ಅರಣ್ಯ ಪ್ರದೇಶದಲ್ಲಿ ಬೆಳೆಯುವುದರಿಂದ ಮರಗಳ ಸಂಖ್ಯೆಯ ಬಗ್ಗೆ ಮಾಹಿತಿ ಇರುವುದಿಲ್ಲ.

ಇ) ಗುತ್ತಿಗೆ ಕರಾರು ಪತ್ರ ಇನ್ನೂ ಮಾಡಿರುವುದಿಲ್ಲ. ಸಧ್ಯದಲ್ಲೆ ಮಾಡಲಾಗುವುದು.

ತೀರ್ಥಹಳ್ಳಿಯ ಎಂ. ಕೆ. ಬೈಲು ಡಿಪೋದಲ್ಲಿ ನಾಟಾ ದಾಸ್ತಾನು ಮಾಡಲು ಲೀಸ್ ಕೊಟ್ಟಿರುವ ಕುರಿತು

೩೩೫ (೭೦೦) ಶ್ರೀ ಜಿ. ರಾಜುಗೌಡ (ಹನೂರು).—ಮಾನ್ಯ ವ್ಯವಸಾಯ ಮತ್ತು ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ತೀರ್ಥಹಳ್ಳಿಯ ಎಂ. ಕೆ. ಬೈಲು ಡಿಪೋದಲ್ಲಿ ನಾಟಾ, ಎಳೆಕಟ್ಟಿಗೆ ಮತ್ತು ಇದ್ದಿಲು ದಾಸ್ತಾನು ಮಾಡಲು ನೆಲವನ್ನು ಬಾಡಿಗೆಗಾಗಿ ಅರಣ್ಯ ಇಲಾಖೆಯ ಗುತ್ತಿಗೆದಾರರಿಗೆ ಅಥವಾ ರಾಷ್ಟ್ರೀಕೃತ ಬ್ಯಾಂಕ್‌ಗಳಿಗೆ ಗುತ್ತಿಗೆ ಕೊಡಲಾಗಿದೆಯೇ ?

ಆ) ಕೊಡಲಾಗಿದ್ದಲ್ಲಿ ಯಾವ ದರದಲ್ಲಿ ಕೊಡಲಾಗಿದೆ ಹಾಗೂ ಯಾರ್‍ಯಾರಿಗೆ ಎಷ್ಟೆಷ್ಟು ಅವಧಿಗೆ ಕೊಡಲಾಗಿದೆ ?

ಶ್ರೀ ಬಿ. ರಾಚಯ್ಯ (ವ್ಯವಸಾಯ ಮತ್ತು ಅರಣ್ಯ ಮಂತ್ರಿಗಳು).—

ಅ) ಕೆಳಕಂಡ ಇಬ್ಬರು ಅರಣ್ಯ ಗುತ್ತಿಗೆದಾರರಿಗೆ ಮಾತ್ರ ಕೊಡಲಾಗಿತ್ತು:

೧. ಶ್ರೀ ಕೆ. ಜಿ. ಜಗದೀಶ್ ಒಡೆಯರ್, ಅರಣ್ಯ ಗುತ್ತಿಗೆದಾರರು, ಸಾಗರ.

೨. ಶ್ರೀ ಎಂ. ಎಂ. ಕರೀಂ, ಅರಣ್ಯ ಗುತ್ತಿಗೆದಾರರು, ನಾಪೋಕ್ಲು.